ಬ್ರೇಸ್ ವರೆಗೆ ಕೆಲಸ ಮಾಡಿ ಸ್ಥಗಿತಗೊಳಿಸಿದ್ದುದರಿಂದ ಗುತ್ತಿಗೆಯನ್ನು ರದ್ದುಪಡಿಸಿ ಮತ್ತೆ ಟೆಂಡರ್ ಕರೆಯಲಾಗಿದೆ. ನೀರು ವಿತರಣಾ ಕೊಳವೆ ಜಾಲವು ಶೇ. 90ರಷ್ಟು ಮುಗಿದಿದೆ. ಈ ಯೋಜನೆಯನ್ನು 1999ರ ಡಿಸೆಂಬರ್ ಅಂತ್ಯದಲ್ಲಿ ಚಾಲನೆ ಮಾಡಲು ಉದ್ದೇಶಿಸಲಾಗಿದೆ.

ಇ) ಒಳಚರಂಡಿ ಯೋಜನೆಗೆ ರೂ. 651.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು 1994-95ರಲ್ಲಿ ತಯಾರಿಸಿದ್ದು ಸರ್ಕಾರದ ತಾತ್ವಿಕ ಅನುಮೋದನೆ ದೊರೆತಿದ್ದು, ಪುರಸಭೆಯು ತನ್ನವಂತಿಕೆಯ 1/3ಭಾಗ ಹಣ ಪಾವತಿ ಮಾಡದಿದ್ದುದರಿಂದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಈಗ ಅಂದಾಜನ್ನು 1996-97ರ ದರಪಟ್ಟಿಯಂತೆ ರೂ. 873.50 ಲಕ್ಷಗಳಿಗೆ ಪರಿಷ್ಕರಿಸಿದ್ದು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆಯಲು ಯತ್ನಿಸಿದ್ದು ಅವರಿಂದ ಮಂಜೂರಾತಿ ಪಡೆದ ನಂತರ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆದು ಕೆಲಸ ಪ್ರಾರಂಭಿಸಲಾಗುವುದು.

ರಾಜ್ಯದ ಪುರಸಭೆ ಹಾಗೂ ಮಹಾನಗರ ಪಾಲಿಕೆಗಳಿಗೆ ಸರ್ಕಾರದ ಅನುದಾನ

718 - ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪುರಸಭೆ ಹಾಗೂ ಮಹಾನಗರಪಾಲಿಕೆಗಳಿಗೆ 1994-95, 95-96, ಹಾಗೂ 97-98 ರಲ್ಲಿ ಕೊಟ್ಟಿರುವ ರಾಜ್ಯ ಸರ್ಕಾರದ ಅನುದಾನಗಳ ಪಾಲು ಎಷ್ಟು? ಹಾಗೂ ಯಾವ ಇಲಾಖಾ ಖಾತೆಗಳ ಮೂಲಕ ಎಷ್ಟು ಮೊತ್ತ ಕೊಡಲಾಗಿದೆ.

ಆ) 1998-99ರಲ್ಲಿ ರಾಜ್ಯ ಹಣಕಾಸು ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವುದರಿಂದ ಪುರಸಭೆ ಹಾಗೂ ಮಹಾನಗರಪಾಲಿಕೆಗೆ ಸಿಗುವ ಹಣ ಪ್ರತ್ಯೇಕ ತಿಳಿಸಿದ್ದು ಹಾಗೂ ಎಷ್ಟು ಹೆಚ್ಚುವರಿ ಹಣ ಬರುವುದು ಇಲಾಖಾವಾರು ವಿವರ ನೀಡುವುದು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ)

	ಜಕಾತಿ	ಮೋಟಾರು ವಾಹನ	ಅಭಿವೃದ್ಧಿ ಅನುದಾನ
94-95 ಮಹಾನಗರ ಪಾಲಿಕೆ	788789420	19495000	-
ನಗರ/ಪುರ/ ಪ.ಪಂಚಾಯಿತಿ	312945736	61130000	25000000
95-96	982782947	19495000	-
	306773726	61130000	160000000

	ಜಕಾತಿ	ಮೋಟಾರು ವಾಹನ	ಅಭಿವೃದ್ಧಿ ಅನುದಾನ
96-97	955792250	33420000	-
	420331750	47580000	25000000
97-98	ರಾಜ್ಯದ ಹಣಕಾಸು ಆಯೋಗದ ಅಡಿಯಲ್ಲಿ ಅಯವ್ಯಯದಲ್ಲಿ ಕಲ್ಪಿಸಲಾದ ಅನುದಾನ ಮಹಾನಗರಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಮೊತ್ತ ಈ ಕೆಳಗಿನಂತಿದೆ.		
ಮಹಾನಗರ ಪಾಲಿಕೆಗಳು	143, 26, 80, 168		
ನಗರ/ಪುರ/ಪ.ಪಂಚಾಯ್ತಿ	125,78,61,834		

ಆ) 1997-98ರಲ್ಲಿ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಅಯವ್ಯಯದಲ್ಲಿ ಕಲ್ಪಿಸಲಾದ ಅನುದಾನದ ಮೊತ್ತದಲ್ಲಿ ಮಹಾನಗರಪಾಲಿಕೆಗಳು ಕಳೆದ ವರ್ಷ ಪಡೆಯುತ್ತಿದ್ದ ಅನುದಾನ ಮುಂದುವರೆದು ಇದಕ್ಕೆ ಎಸ್‌ಎಫ್‌ಸಿ ವೇಟೇಜ್‌ನ ಪ್ರಕಾರ ಬರುವ ಅನುದಾನವನ್ನು ಸೇರಿಸಿ ಮಹಾನಗರಪಾಲಿಕೆಗಳಿಗೆ ಪಾಲನ್ನು ನಿರ್ಧರಿಸಿ ಅದರಂತೆ ಅನುದಾನ ಬಿಡುಗಡೆ ಮಾಡಲಾಗಿದೆ. ಇತರ ಸ್ಥಳೀಯ ಸಂಸ್ಥೆಗಳಿಗೆ ಅಲ್ಲಿನ ಪೌರ ಸೇವಾ ವೃಂದದ ನೌಕರರ ವೇತನ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬಾಕಿ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸ್ಥಳೀಯ ಸಂಸ್ಥೆಗಳ ಪರವಾಗಿ ನೀಡಬೇಕಾದ ಸಾಲದ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

ಉಪಾಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪುಸ್ತಾಪಿಸಲಾದ ವಿಷಯಗಳು

ಬೆಳೆನಾಶವಾಗಿರುವ ಬಗ್ಗೆ ಜಂಟಿ ಸದನ ಸಮಿತಿ ಅವಧಿ ವಿಸ್ತರಣೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬೆಳೆ ನಾಶ ಆಗಿರುವ ಬಗ್ಗೆ ಅದನ್ನು ಪರಿಶೀಲಿಸಿ ವರದಿ ಕೊಡಲು ಜಂಟಿ ಸದನ ಸಮಿತಿಯನ್ನು ನಾವು ರಚನೆ ಮಾಡಿದ್ದೆವು. ಆ ಜಂಟಿ ಸದನ ಸಮಿತಿಯ ಅಧ್ಯಕ್ಷರು ನಮಗೂ ಒಂದು ಪತ್ರವನ್ನು ಬರೆದಿದ್ದಾರೆ. ಜಂಟಿ ಸದನ ಸಮಿತಿಯ ವರದಿಯನ್ನು ಈ ಸದನಕ್ಕೆ ಸಲ್ಲಿಸುವುದಕ್ಕೋಸ್ಕರವಾಗಿ ಮೇ ತಿಂಗಳ 11ನೇ ತಾರೀಖಿನವರೆಗೆ ಸಮಯವನ್ನು ವಿಸ್ತರಣೆ ಮಾಡಬೇಕೆಂದು ಆ ಪತ್ರದಲ್ಲಿ ಕೇಳಿದ್ದಾರೆ. ಬಹುಶಃ ಅದನ್ನು ಈ ಸದನ ಒಪ್ಪುವುದಾದರೆ ಮಾಡಬಹುದು.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಬಹಳ ತುರ್ತಾಗಿದೆಯೆಂದು ತಿಳಿದುಕೊಂಡೇ ಸದನಸಮಿತಿಯನ್ನು ರಚಿಸಬೇಕೆಂದು